ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

ದಿನಾಂಕ : DATE : 13/03/2020

# ಮ.ಪ್ರ.ಶಾಸಕರಿಗೆ ಸಮನ್ಸ್

## ಖುದ್ದು ಹಾಜರಿಗೆ ಸ್ಪೀಕರ್ ಸೂಚನೆ | 16ರಂದು ವಿಶ್ವಾಸಮತ?

ಭೋಪಾಲ್: ಮಧ್ಯಪ್ರದೇಶದಲ್ಲಿ ರಾಜಕೀಯ ಅಸ್ಥಿರತೆ ಮುಂದುವರಿದಿದೆ. ಮಾರ್ಚ್ 16ರ ಬಜೆಟ್ ದಿನದಂದು ವಿಶ್ವಾಸಮತ ಯಾಚನೆಗೆ ಪಟ್ಟು ಹಿಡಿಯಲು ಬಿಜೆಪಿ ನಿರ್ಧರಿಸಿದೆ. ಇನ್ನೊಂದೆಡೆ ಶುಕ್ರವಾರದೊಳಗೆ ತಮ್ಮ ಮುಂದೆ ಹಾಜರಾಗಿ ರಾಜೀನಾಮೆ ಬಗ್ಗೆ ಸ್ಪಷ್ಟನೆ ನೀಡುವಂತೆ 22 ರೆಬೆಲ್ ಶಾಸಕರಿಗೆ ವಿಧಾನಸಭಾಧ್ಯಕ್ಷ ಎನ್.ಪಿ. ಪ್ರಜಾಪತಿ ನೋಟಿಸ್ ನೀಡಿದ್ದಾರೆ.

ಬೆಂಗಳೂರಿನ ರೆಸಾರ್ಟ್‌ನಲ್ಲಿ ತಂಗಿರುವ 19 ಜ್ಯೋತಿರಾಧಿತ್ಯ ಸಿಂಧಿಯಾ ನಿಷ್ಠ ಶಾಸಕರು 3 ದಿನಗಳ ಹಿಂದೆ ರಾಜೀನಾಮೆ ಯನ್ನು ಅಲ್ಲಿಂದಲೇ ರವಾನಿಸಿದ್ದರು. ಇವಲ್ಲದೆ ಮಧ್ಯ ಪ್ರದೇಶದಲ್ಲೇ ಇರುವ 3 ಕಾಂಗ್ರೆಸ್ ಶಾಸಕರು ಕೂಡ ರಾಜೀನಾಮೆ ಸಲ್ಲಿಸಿದ್ದರು. ಆದರೆ ತಮ್ಮ ಮುಂದೆ ಈ ಶಾಸಕರು ಶುಕ್ರವಾರದೊಳಗೆ ಖುದ್ದು ಹಾಜರಾಗಬೇಕು. ರಾಜೀನಾಮೆಯನ್ನು ಸ್ವ ಇಚ್ಛೆಯಿಂದ ನೀಡಿದರೋ ಅಥವಾ ಒತ್ತಡಕ್ಕೊಳಗಾಗಿ ಕೊಟ್ಟರೋ ಸ್ಪಷ್ಟಪಡಿಸಬೇ ಕು ಎಂದು ಪ್ರಜಾಪತಿ ಅವರು ನೋಟಿಸ್‌ನಲ್ಲಿ ತಿಳಿಸಿದ್ದಾರೆ.





ಇನ್ನೊಂದೆಡೆ ವಿಧಾನಸಭೆಯ ಬಿಜೆಪಿ ಮುಖ್ಯ ಸಚೇತಕ ನರೋತ್ತಮ ಮಿಶ್ರಾ ಮಾತನಾಡಿ, 'ರಾಜ್ಯ ಸರ್ಕಾರ ಅಲ್ಪಮತಕ್ಕೆ ಇಳಿದಿದೆ. ಹೀಗಾಗಿ ಮಾರ್ಚ್ 16ರಂದು ಬಹುಮತ ಸಾಬೀತಿಗೆ ಮುಖ್ಯಮಂತ್ರಿಗೆ ಸೂಚಿ ಸಬೇಕು ಎಂದು ರಾಜ್ಯಪಾಲರು ಹಾಗೂ ವಿಧಾನಸಭಾಧ್ಯಕ್ಷರನ್ನು ಕೋರಲಿದ್ದೇವೆ' ಎಂದಿದ್ದಾರೆ.

ಅತ್ತ ದಿಲ್ಲಿಯಲ್ಲಿ ಬಿಜೆಪಿ ಸೇರಿರುವ ಸಿಂಧಿಯಾ ಕೇಂದ್ರ ಸಚಿವರಾದ ಅಮಿತ್ ಶಾ ಹಾಗೂ ರಾಜನಾಥ ಸಿಂಗ್ ಅವರನ್ನು ಭೇಟಿ ಮಾಡಿದರು. ಭೋಪಾಲ್‌ಗೆ ಆಗಮಿಸಿದ ಅವರಿಗೆ ಅದ್ದೂರಿ ಸ್ವಾಗತ ದೊರೆಯಿತು.

**ಸಿಂಧಿಯಾಗೆ ಬಿಜೆಪಿಯಲ್ಲಿ ಗೌರವ ಸಿಗಲ್ಲ: ರಾಹುಲ್**

ನವದೆಹಲಿ: ಸಿಂಧಿಯಾ ತಮ್ಮ ತತ್ವಾದರ್ಶಗಳನ್ನೇ ಮರೆತು ಬಿಜೆಪಿ ಸೇರಿದ್ದಾರೆ. ಅವರಿಗೆ ರಾಜಕೀಯ ಅಸ್ಥಿರತೆ ಕಾಡುತ್ತಿತ್ತು' ಬಿಜೆಪಿಯಲ್ಲಿ ಸಿಂಧಿಯಾಗೆ ಗೌರವ ಹಾಗೂ ತೃಪ್ತಿ ದೊರಕುವುದಿಲ್ಲ. ಸಿಂಧಿಯಾ ಅವರ ಬಾಯಿ ಮಾತಿಗೂ ಹೃದಯದ ಮಾತಿಗೂ ವ್ಯತ್ಯಾಸಗಳಿವೆ' ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.